ನಮ್ಮ ಮಾರಾಜ ಕೊಲೆಗಾರ ಅಲ್ಲಪ್ಪ; ಅವರು ಒಂದೂ ಹುಲೀನೂ ಕೊಲೆಮಾಡಿಲ್ಲ" ಎಂದು ಬಿಟ್ಟಳು. ನಾನು ಪುನಃ ಕೇಳಿದೆ "ಯಾಕೆ ಮಸಣಮ್ಮ ತುಪಾಕಿ ಇತ್ತಲ್ಲ ಅವರ ಹತ್ರ; ಹುಲಿನ್ಯಾಕ್ ಹೊಡೀಲಿಲ್ಲ?'' ನನ್ನ ಅಜ್ಞಾನಕ್ಕೆ ಅಸಮಾಧಾನಗೊಂಡು "ತುಪಾಕಿ ಇದೆ ಅಂತ ಹುಲಿನ್ಯಾಕಪ್ಪ ಹೊಡೀಬೇಕು? ಇಲ್ಲಪ್ಪ, ಅವರು ಕೊಲೆಗಾರ ಅಲ್ಲ, ಅವರು ಹುಲೀನ ಕೊಲೆ ಮಾಡಲಿಲ್ಲ" ಎಂದು ಅದೇ ಮಾತನ್ನು ಪುನರುಚ್ಚರಿಸಿದಳು. ಅವಳ ಪ್ರಕಾರ ಹುಲಿ ಸಾಯಿಸುವುದು ಎಂದರೆ ಒಂದು ಘೋರ ಕೊಲೆ ಮಾಡಿದಂತೆ, ಹಾಗಾಗಿ ಆಕೆ 'ಕೊಲೆ' ಎನ್ನುವ ಪದವನ್ನು ಪದೇಪದೇ ಬಳಸುತ್ತಿದ್ದಳು. ಮಸಣಮ್ಮನ ಮಗಳೂ ಸಹ "ಇಲ್ಲ ಸ್ವಾಮಿ ಮಹಾರಾಜರು ಹುಲಿ ಕೊಂದದ್ದು ನಮಗ್ಯಾರಿಗೂ ಗೊತ್ತಿಲ್ಲ; ನಮ್ಮ ಅಯ್ಯನ (ತಂದೆ) ಬಾಯಲ್ಲೂ ನಾವು ಕೇಳಿಲ್ಲ, ಆದರೆ ಮಹಾರಾಜರಿಗೆ ಕಾಡಿನಲ್ಲಿ ಆನೆ, ಕಾಟಿ, ಕರಡಿಗಳು ಹೀಗೆ ಪ್ರಾಣಿಗಳನ್ನು ನೋಡೊ ಆಸೆ ಬಾಳ" ಎಂದಳು. ಇದು ನನಗೆ ಆಶ್ಚರ್ಯ ಎನಿಸಿತು. ಹಿಂದೆಲ್ಲ ರಾಜ ಮಹಾರಾಜರು ತಮ್ಮ ಶಕ್ತಿ ಪ್ರದರ್ಶನ ಮಾಡಲು ಒಂದೋ – ಎರಡೋ ಹುಲಿಗಳನ್ನು ಕೊಲ್ಲುವುದು ವಾಡಿಕೆ. ಮಹಾರಾಜರು ಬೆಟ್ಟಕ್ಕೆ ಬರುತ್ತಿದ್ದುದೇ ಶಿಕಾರಿ ಮಾಡಲು ಎಂದು ಅನೇಕರು ಭಾವಿಸುತ್ತಿದ್ದರು. ಹಾಗಾಗಿ ಅವರ ಬಂಗಲೆಗೆ

